“ ಮಧುರ ಮಕ್ಕಳೇ - ಶ್ರೇಷ್ಠರಾಗುವುದಕ್ಕೋಸ್ಕರ ಸದಾ ಶ್ರೀಮತದಂತೆ ನಡೆಯುತ್ತಾ ಇರಬೇಕು, ಲಕ್ಷ್ಮಿ-ನಾರಾಯಣರೂ ಸಹ ಶ್ರೀಮತದಿಂದ ಇಷ್ಟು ಶ್ರೇಷ್ಠರಾಗಿದ್ದಾರೆ. ”

**ಪ್ರಶ್ನೆ:** ಭಕ್ತಿಯಲ್ಲಿ ಗೋಮುಖದ ನೆನಪಾರ್ಥವನ್ನು ಏಕೆ ಮಾಡಿದ್ದಾರೆ, ಗೋಮುಖದ ಗಾಯನವು ಏಕೆ ಇದೆ?

**ಉತ್ತರ:** ಏಕೆಂದರೆ ಸಂಗಮಯುಗದಲ್ಲಿ ತಂದೆಯು ಜ್ಞಾನದ ಕಳಶವನ್ನು ಮಾತೆಯರ ಮೇಲಿಟ್ಟಿದ್ದಾರೆ. ನಿಮ್ಮ ಮುಖದಿಂದ ಜ್ಞಾನಾಮೃತವು ಬರುತ್ತದೆ. ಅದರಿಂದ ಎಲ್ಲರೂ ಪಾವನರಾಗಿ ಬಿಡುತ್ತಾರೆ. ನೀವು ಭಾರತ ಮಾತೆಯರನ್ನೇ ಶಕ್ತಿಯ ಅವತಾರವೆಂದು ಹೇಳಲಾಗುತ್ತದೆ. ನೀವು ಎಲ್ಲರ ಮನೋಕಾಮನೆಗಳನ್ನು ಪೂರ್ಣ ಮಾಡುತ್ತೀರಿ, ಆದ್ದರಿಂದ ನೆನಪಾರ್ಥವನ್ನು ಮಾಡಲಾಗಿದೆ.

**ಗೀತೆ:** ನಯನಹೀನನಿಗೆ ದಾರಿ ತೋರಿಸು ಪ್ರಭು.............................

ಓಂ ಶಾಂತಿ. ಮಕ್ಕಳು ಗೀತೆಯನ್ನು ಕೇಳಿದಿರಿ. ಭಕ್ತಿಮಾರ್ಗದ ಮಕ್ಕಳು ತಂದೆಯನ್ನು ಕರೆಯುತ್ತಾರೆ - ನಾವು ನಯನಹೀನರು, ಬುದ್ಧಿಹೀನರಾಗಿ ಬಿಟ್ಟಿದ್ದೇವೆ, ನಮಗೆ ದಾರಿ ತೋರಿಸಿ. ಹೇ ಪ್ರಭೂ ಎಂದು ತಮ್ಮ ತಂದೆಯನ್ನು ನೆನಪು ಮಾಡುತ್ತಾರೆ. ಅವರನ್ನೇ ಪರಮಪಿತ ಪರಮಾತ್ಮನೆಂದು ಹೇಳಲಾಗುತ್ತದೆ. ಎಲ್ಲಾ ಜೀವಾತ್ಮಗಳು ತಂದೆಯನ್ನು ನೆನಪು ಮಾಡುತ್ತಾರೆ. ನಾವು ಈ ಪತಿತ ಪ್ರಪಂಚದಲ್ಲಿ ಬಹಳ ದುಃಖಿಯಾಗಿದ್ದೇವೆ. ಅಲ್ಲಿ-ಇಲ್ಲಿ ಅಲೆದಾಡುತ್ತಿರುತ್ತೇವೆ. ಎಲ್ಲಿಯೇ ಹೋದರೂ ನಾವು ಯಾರ ಬಳಿ ಹೋಗುತ್ತೇವೆಯೋ ಅವರ ಕರ್ತವ್ಯದ ಬಗ್ಗೆ ಏನೂ ಗೊತ್ತಿಲ್ಲ. ಶಿವನ ಮಂದಿರಕ್ಕೆ ಹೋಗುತ್ತಾರೆ, ಆದರೆ ಶಿವನು ಯಾರಾಗಿದ್ದಾರೆ ಎಂಬುದೂ ಸಹ ಗೊತ್ತಿಲ್ಲ. ಎಲ್ಲಿಯೇ ಹೋದರೂ ತಲೆ ಬಾಗುತ್ತಾರೆ. ಅವರು ಯಾರು? ಯಾವಾಗ ಬಂದಿದ್ದರು ಎಂದು ತಿಳಿದುಕೊಂಡಿಲ್ಲ. ಲಕ್ಷ್ಮೀ-ನಾರಾಯಣರ ಮಂದಿರಕ್ಕೂ ಹೋಗುತ್ತಾರೆ, ಅವರು ಯಾವಾಗ ಬಂದರು, ಹೇಗೆ ರಾಜ್ಯವನ್ನು ಪಡೆದರು? ಏನೂ ಗೊತ್ತಿಲ್ಲ. ದಿಲ್ವಾಡಾ ಮಂದಿರಕ್ಕೆ ಹೋಗುತ್ತಾರೆ ಮತ್ತು ಜಗದಂಬನ ಬಳಿ ಹೋಗುತ್ತಾರೆ. ಅವರು ಯಾವಾಗ ಬಂದರು, ಏನು ಮಾಡಿದರು ಏನೂ ತಿಳಿದುಕೊಂಡಿಲ್ಲ, ಕೇವಲ ಹೋಗಿ ತಲೆ ಬಾಗುತ್ತಾರೆ. ಮಕ್ಕಳನ್ನು ಕೊಡಿ, ಇದನ್ನು ಕೊಡಿ, ಅದನ್ನು ಕೊಡಿ ಎಂದು ಪ್ರಾರ್ಥನೆ ಮಾಡುತ್ತಾರೆ. ಏನನ್ನೂ ತಿಳಿದುಕೊಂಡಿಲ್ಲ. ಗೋಮುಖಕ್ಕೆ ಹೋಗುತ್ತಾರೆ. ಎಷ್ಟೊಂದು ಪರಿಶ್ರಮ ಪಟ್ಟು ಮೆಟ್ಟಿಲುಗಳನ್ನು ಹತ್ತಿ ಇಳಿಯುತ್ತಾರೆ. ಅಲ್ಲಿ ಏನನ್ನು ಇಟ್ಟಿದ್ದಾರೆಂದು ಗೊತ್ತಿಲ್ಲ. ಒಂದು ಕಲ್ಲಿನಿಂದ ಗೋಮುಖವನ್ನು ಮಾಡಿದ್ದಾರೆ, ಗೋಮುಖದಿಂದ ಗಂಗಾಜಲವು ಬರುತ್ತದೆ ಎಂದು ಹೇಳುತ್ತಾರೆ. ಪ್ರಾಣಿಯ ಮುಖದಿಂದ ಅಮೃತವು ಬರಲು ಸಾಧ್ಯವೇ! ತೀರ್ಥ ಸ್ಥಾನಗಳಿಗೆ ಹೋಗುತ್ತಾರೆ, ಅವರು ಯಾವಾಗ ಬಂದರು, ಬಂದು ಏನು ಮಾಡಿದರು? ಅವರನ್ನು ನಾವು ಏಕೆ ಪೂಜಿಸುತ್ತೇವೆ ಮತ್ತು ಅವರ ಕರ್ತವ್ಯವನ್ನು ತಿಳಿದುಕೊಂಡಿಲ್ಲ. ಬುದ್ಧಿಹೀನರಾಗಿರುವ ಕಾರಣ ಹೇ ಪ್ರಭು, ಹೇ ತಂದೆಯೇ ಎಂದು ಕರೆಯುತ್ತಾರೆ. ಏಕೆಂದರೆ ಅವರು ಎಲ್ಲರ ತಂದೆಯಾಗಿದ್ದಾರೆ. ಮನುಷ್ಯರಿಗೆ ಮೂವರು ತಂದೆಯರಿದ್ದಾರೆಂದು ಹೇಳಲಾಗುತ್ತದೆ - ಒಬ್ಬರು ಆತ್ಮಗಳ ತಂದೆ ಶಿವನಾಗಿದ್ದಾರೆ, ಇನ್ನೊಬ್ಬರು ಇಡೀ ಮನುಷ್ಯ ಸೃಷ್ಟಿಯ ರಚಯಿತ ಮೂರನೆಯವರು ಲೌಕಿಕ ತಂದೆ. ಭಕ್ತರೂ ಸಹ ಒಬ್ಬ ಭಗವಂತನನ್ನೇ ನೆನಪು ಮಾಡುತ್ತಾರೆ. ನಯನಹೀನನಿಗೆ ದಾರಿ ತೋರಿಸು ಪ್ರಭು, ನಾವು ಸದಾ ಹಾಗೆಯೇ ಇರಬೇಕು ಎಂದು ನೆನಪು ಮಾಡುತ್ತಾರೆ. ಈ ಕಲಿಯುಗವಂತೂ ದುಃಖಧಾಮವಾಗಿದೆ. ಸತ್ಯಯುಗ ಸುಖಧಾಮವಾಗಿದೆ ಮತ್ತು ಎಲ್ಲಿಂದ ನಾವಾತ್ಮಗಳು ಪಾತ್ರ ಮಾಡಲು ಬರುತ್ತೇವೆಯೋ ಅದು ಶಾಂತಿಧಾಮವಾಗಿದೆ. ಆತ್ಮಕ್ಕೆ ಈ ಶರೀರರೂಪಿ ವಸ್ತ್ರ ಅಥವಾ ಈ ಕರ್ಮೇಂದ್ರಿಯಗಳು ಇಲ್ಲಿ ಸಿಗುತ್ತದೆ ಅದರಿಂದ ಆತ್ಮವು ಕರ್ಮ ಮಾಡುತ್ತದೆ. ಆತ್ಮವು ಅವಿನಾಶಿಯಾಗಿದೆ, ಆದರೆ ಶರೀರ ವಿನಾಶಿಯಾಗಿದೆ. ಆತ್ಮವು ಪಾರಲೌಕಿಕ ಪರಮಪಿತ ಪರಮಾತ್ಮನ ಸಂತಾನವಾಗಿದೆ. ಶರೀರವು ಲೌಕಿಕ ತಂದೆಯ ಸಂತಾನವಾಗಿದೆ. ಆತ್ಮದ ತಂದೆ ಒಬ್ಬರೇ ಆಗಿದ್ದಾರೆ. ಅವರನ್ನು ನೆನಪು ಮಾಡುವುದರಿಂದ ಆಸ್ತಿಯು ಸಿಗುತ್ತದೆ. ಯಾವುದೇ ಮನುಷ್ಯರಿಂದ ಬೇಹದ್ದಿನ ಶಾಂತಿ ಮತ್ತು ಸುಖದ ಆಸ್ತಿಯು ಸಿಗುವುದಿಲ್ಲ. ಭಲೆ ಯಾರೇ ಆಗಿರಬಹುದು, ಬ್ರಹ್ಮ, ವಿಷ್ಣು, ಶಂಕರರನ್ನೇ ಹೇಳಬಹುದು. ಆದರೆ ಪರಮಪಿತ ಪರಮಾತ್ಮ ಒಬ್ಬ ಶಿವನೇ ಆಗಿದ್ದಾರೆ. ಶಿವ ಪರಮಾತ್ಮಾಯ ನಮಃ ಎಂದು ಹೇಳುತ್ತಾರೆಯೇ ಹೊರತು ಬ್ರಹ್ಮ ಪರಮಾತ್ಮಾಯ ನಮಃ ಎಂದು ಹೇಳುವುದಿಲ್ಲ. ಅಂದಾಗ ಯಾವುದೆಲ್ಲಾ ಮಂದಿರ ಮುಂತಾದುವುಗಳಿವೆಯೋ ಅಲ್ಲಿರುವವರ ಜೀವನ ಚರಿತ್ರೆಯ ಬಗ್ಗೆ ಯಾರಿಗೂ ಸಹ ತಿಳಿದಿಲ್ಲ. ಸರ್ವ ಶ್ರೇಷ್ಠವಾದ ಪರಮಪಿತ ಪರಮಾತ್ಮ ಶಿವನಾಗಿದ್ದಾರೆ. ನಂತರ ರಚನೆಯಾಗಿ ಬ್ರಹ್ಮ, ವಿಷ್ಣು, ಶಂಕರರನ್ನು ರಚಿಸುತ್ತಾರೆ. ಶಿವ ನಿರಾಕಾರನೇ ಬೇರೆಯಾಗಿದ್ದಾರೆ, ಶಂಕರನು ಆಕಾರಿ ದೇವತೆಯೇ ಬೇರೆ ಇದ್ದಾರೆ. ಪರಮಾತ್ಮ ಒಬ್ಬನೇ ಆಗಿದ್ದಾರೆ ಎನ್ನುವುದನ್ನು ಮೊಟ್ಟ ಮೊದಲು ಚೆನ್ನಾಗಿ ತಿಳಿಸಿ ಕೊಡಬೇಕು. ಯಾವ ತಂದೆಯು ಸ್ವರ್ಗದ ರಚಯಿತನಾಗಿದ್ದಾರೆಯೋ ಆ ತಂದೆಯನ್ನು ಮೊಟ್ಟ ಮೊದಲು ತಿಳಿದುಕೊಳ್ಳಬೇಕಾಗಿದೆ. ಮನುಷ್ಯರು ಭಕ್ತಿಯಲ್ಲಿ ಬಹಳಷ್ಟು ಪೆಟ್ಟನ್ನು ತಿನ್ನುತ್ತಾರೆ. ಲಕ್ಷ್ಮಿ-ನಾರಾಯಣರು ಸ್ವರ್ಗದ ಮಾಲೀಕರಾಗಿದ್ದಾರೆ, ಅಲ್ಲಿ ಸದಾಕಾಲ ಸುಖವಿರುತ್ತದೆ. ಇಲ್ಲಿ ಎಲ್ಲರೂ ಸಹ ದುಃಖಿಗಳಾಗಿದ್ದಾರೆ, ಏಕೆಂದರೆ ಈ ಪ್ರಪಂಚವೇ ದುಃಖಿಯಾಗಿದೆ. ಸತ್ಯಯುಗದಲ್ಲಿ ಭಾರತ ಪವಿತ್ರ ಗೃಹಸ್ಥ ಆಶ್ರಮವಾಗಿತ್ತು. ಹೇಗೆ ರಾಜ-ರಾಣಿಯರಿದ್ದರು ಹಾಗೆಯೇ ಪ್ರಜೆಗಳೆಲ್ಲರೂ ಪಾವನವಾಗಿದ್ದರು ಅಂದಾಗ ಪತಿತರನ್ನು ಪಾವನ ಮಾಡುವಂತಹವರು ಒಬ್ಬ ಪರಮಪಿತ ಪರಮಾತ್ಮನಾಗಿದ್ದಾರೆ.

ರಾಧೆ-ಕೃಷ್ಣರು ಸತ್ಯಯುಗದ ರಾಜಕುಮಾರ-ರಾಜಕುಮಾರಿಯರಾಗಿದ್ದಾರೆ, ಅವರೇ ಸ್ವಯಂವರದ ನಂತರ ಲಕ್ಷ್ಮಿ-ನಾರಾಯಣರಾಗುತ್ತಾರೆ. ಶಿವಾಲಯವೆಂದು ಸ್ವರ್ಗಕ್ಕೆ ಹೇಳಲಾಗುತ್ತದೆ. ಈಗ ತಂದೆಯು ಎಲ್ಲರನ್ನೂ ಪಾವನರನ್ನಾಗಿ ಮಾಡುತ್ತಿದ್ದಾರೆ, ಅದರಲ್ಲೂ ಈ ಭಾರತದ ಮಾತೆಯರ ಮುಖಾಂತರ. ಏಕೆಂದರೆ ಅವರಿಗೆ ಜ್ಞಾನದ ಕಳಸವನ್ನು ಕೊಟ್ಟಿದ್ದಾರೆ. ಭಾರತದಲ್ಲಿ ಪವಿತ್ರ ರಾಜ್ಯವಿತ್ತು. ಈಗ ಅಪವಿತ್ರ ರಾಜ್ಯವಾಗಿದೆ. ಗೃಹಸ್ಥ ಧರ್ಮದ ಬದಲಾಗಿ ಗೃಹಸ್ಥ ಅಧರ್ಮವಾಗಿದೆ. ನಂತರ ತಂದೆಯೇ ಬಂದು ಪುನಃ ಪಾವನರನ್ನಾಗಿ ಮಾಡುತ್ತಾರೆ. ತಂದೆಯು ಆತ್ಮಗಳ ಜೊತೆ ನಾನು ಪರಮಪಿತ ಪರಮಾತ್ಮ ಬಂದಿದ್ದೇನೆಂದು ಮಾತನಾಡುತ್ತಾರೆ. ಆತ್ಮ, ಪರಮಾತ್ಮ ಬಹಳಕಾಲ ಅಗಲಿ ಹೋಗಿದ್ದರು. ನೀವು ಬಹಳ ಸಮಯದಿಂದ ಅಗಲಿ ಹೋಗಿದ್ದಿರಿ. ಈಗ ತುಂಬಾ ರೋಗಿ, ಕಂಗಾಲರು, ಕವಡೆಯ ಸಮಾನರಾಗಿದ್ದಿರಿ. ಪುನಃ ನೀವೇನಾದರೂ ಒಂದುವೇಳೆ ನನ್ನ ಸಮಾನರಾಗಬೇಕಾದರೆ ಪುರುಷಾರ್ಥವನ್ನು ಮಾಡಿ. ಈ ಭಾರತಮಾತೆ ಶಕ್ತಿಯ ಅವತಾರವಾಗಿದ್ದಾರೆ, ಈ ಶಿವತಂದೆಯನ್ನು ತಮ್ಮ ತಂದೆಯನ್ನು ಎಲ್ಲರೂ ಗೌರವಿಸುತ್ತಾರೆ. ಅವರ ಜೊತೆ ನೆನಪು ಮಾಡುವುದರಿಂದ ಶಕ್ತಿಯು ಸಿಗುತ್ತದೆ. ಆದರಿಂದ 5 ವಿಕಾರಗಳ ಮೇಲೆ ವಿಜಯವನ್ನು ಪಡೆದು ಮಾಯಾಜೀತ್, ಜಗತ್ಜೀತರಾಗುತ್ತೀರಿ. ಇದು ಸೋಲು-ಗೆಲುವಿನ ಆಟವಾಗಿದೆ. ಈ ಇಡೀ ಇತಿಹಾಸ, ಭೂಗೋಳವನ್ನು ತಿಳಿದುಕೊಳ್ಳುವುದರಿಂದ ನೀವು ಚಕ್ರವರ್ತಿ ರಾಜರಾಗುತ್ತೀರಿ. ತಂದೆಯೇ ಸ್ವರ್ಗಕ್ಕೋಸ್ಕರ ಪವಿತ್ರತೆ, ಸುಖ-ಶಾಂತಿಯ ಆಸ್ತಿಯನ್ನು ಕೊಡುತ್ತಾರೆ. ಇದು ರಾಜಯೋಗವಾಗಿದೆ ಹಠಯೋಗಿಗಳೂ ರಾಜಯೋಗವನ್ನು ಕಲಿಸಲು ಸಾಧ್ಯವಿಲ್ಲ.

ಈಗ ನೀವು ಮಕ್ಕಳಿಗೆ ಶ್ರೀಮತ ಸಿಗುತ್ತಿದೆ, ಆದರಿಂದ ನೀವು ಶ್ರೇಷ್ಠರಾಗುತ್ತೀರಿ. ರಾವಣನ ಮತದಿಂದ ನೀವು ಭ್ರಷ್ಟರಾಗುತ್ತೀರಿ. ಈ ಭಾರತವು ಈಗ ರಾವಣನ ಮತದಂತೆ ನಡೆಯುವುದರಿಂದ ಇಷ್ಟೊಂದು ದುಃಖಿ, ಕಂಗಾಲರನ್ನಾಗಿ ಮಾಡಿದೆ. ಜಗದಂಬಾ ಎಲ್ಲರ ಮನೋಕಾಮನೆಗಳನ್ನು ಪೂರ್ಣ ಮಾಡುವವರಾಗಿದ್ದಾರೆ. ಅವರೂ ಸಹ ತಾಯಿಯಾಗಿದ್ದಾರೆ. ಜಗದಂಬಾರವರು ಶ್ರೀಮತದಂತೆ ಭಾರತವನ್ನು ಸ್ವರ್ಗವನ್ನಾಗಿ ಮಾಡಿದರು. ಆದ್ದರಿಂದ ಅವರದು ಎಷ್ಟೊಂದು ಮಹಿಮೆಯನ್ನು ಗಾಯನ ಮಾಡಲಾಗುತ್ತದೆ. ಪವಿತ್ರತೆಯಿಲ್ಲದೇ ನೀವು ಪವಿತ್ರ ಪ್ರಪಂಚದ ಮಾಲೀಕರಾಗಲು ಸಾಧ್ಯವಿಲ್ಲ. ಅರ್ಧಕಲ್ಪ ಭಕ್ತಿಮಾರ್ಗ ನಡೆಯುತ್ತದೆ. ಈಗ ತಂದೆಯು ಹೇಳುತ್ತಾರೆ- ಮತ್ತೆ ಪಾವನ ಪ್ರಪಂಚದ ಮಾಲೀಕರಾಗಬೇಕೆಂದರೆ ಬಂದು ತಿಳಿದುಕೊಳ್ಳಿ. ಈಗ ಶ್ರೀಮತ ಸಿಗುತ್ತದೆ ಎಂದಾಗ ಅದರಂತೆ ನಡೆಯಬೇಕು. ನನ್ನವರಂತೂ ಒಬ್ಬ ಶಿವತಂದೆಯೇ ಹೊರತು ಬೇರೆ ಯಾರೂ ಇಲ್ಲ. ಮನುಷ್ಯರಂತೂ 84 ಜನ್ಮಗಳನ್ನು ತೆಗೆದುಕೊಳ್ಳುತ್ತಾರೆ. ನೀವು ಶಕ್ತಿಯರಗಿದ್ದೀರಿ, ಶಿವತಂದೆಯ ಜೊತೆ ಯೋಗವನ್ನು ಜೋಡಿಸುವುದರಿಂದ ನಿಮಗೆ ಶಕ್ತಿ ಸಿಗುತ್ತದೆ, ಇಲ್ಲದಿದ್ದರೆ ಎಂದೂ ಸಹ ಸ್ವರ್ಗಕ್ಕೆ ಮಾಲೀಕರಾಗಲು ಸಾಧ್ಯವಿಲ್ಲ. ಪಾರಲೌಕಿಕ ತಂದೆಯಿಂದ ಈ ಸಂಗಮಯುಗದಲ್ಲಿ 21 ಜನ್ಮಗಳಿಗೋಸ್ಕರ ಆಸ್ತಿಯು ಸಿಗುತ್ತಿದೆ, ಆದ್ದರಿಂದ ನೀವು ಪುರುಷಾರ್ಥವನ್ನು ಮಾಡಿರಿ. ಮಕ್ಕಳ ಕಲ್ಯಾಣವನ್ನು ಮಾಡಬೇಕು. ಕೇವಲ ಸ್ವರ್ಗದ ಮಾಲೀಕರಾಗಿದ್ದೀರಿ ಇದು ರಾಜಯೋಗದ ಪಾಠಶಾಲೆಯಾಗಿದೆ. ಭಗವಾನುವಾಚ - ಮಕ್ಕಳೇ, ನಾನು ನಿಮಗೆ ರಾಜಯೋಗವನ್ನು ಕಲಿಸುತ್ತಿದ್ದೇನೆ ಆದರಿಂದ ರಾಜರಿಗಿಂತ ರಾಜರು, ಸ್ವರ್ಗದ ಮಾಲೀಕರಾಗುತ್ತೀರಿ. ಕೇವಲ ತಂದೆಯನ್ನು ನೆನಪು ಮಾಡಿದಾಗ ಅಂತಿಮ ಮತಿ ಸೋ ಗತಿಯಾಗುತ್ತದೆ. ತಂದೆಯು ಸುಖಧಾಮದಲ್ಲಿ ಕಳುಹಿಸುತ್ತಾರೆ. ನಾನೇ ಬಂದು ಎಲ್ಲರನ್ನು ಶಾಂತಿಧಾಮ, ಸುಖಧಾಮದಲ್ಲಿ ಕರೆದುಕೊಂಡು ಹೋಗುತ್ತೇನೆ ಎಂದು ತಂದೆಯು ಹೇಳುತ್ತಾರೆ. ಸತ್ಯಯುಗ, ತ್ರೇತಾಯುಗದಲ್ಲಿ ಈ ಭಕ್ತಿ ಮುಂತಾದವು ಇರುವುದಿಲ್ಲ. ಅಲ್ಲಿ 21 ಜನ್ಮಗಳು ಅಪಾರವಾದಂತಹ ಸುಖವಿರುತ್ತದೆ. ಈ ರಾವಣನ ಮೇಲೆ ವಿಜಯವನ್ನು ಗಳಿಸಿರಿ. ವಿಕಾರಿಗಳಿಗೋಸ್ಕರ ಮದುವೆ ಮಾಡಿಕೊಳ್ಳುವುದು ತಮ್ಮ ಜೀವನ ಹಾಳು ಮಾಡಿಕೊಳ್ಳುವುದಾಗಿದೆ ಎಂದು ಈಗ ತಂದೆಯು ಹೇಳುತ್ತಾರೆ. ಪರಮಪಿತ ಪರಮಾತ್ಮನೇ ಬಂದು ಪವಿತ್ರರಾದರೆ ಮಾತ್ರ ಜಗತ್ತಿನ ಮಾಲೀಕರಾಗುತ್ತೀರಿ ಎಂದು ಹೇಳುತ್ತಾರೆ. ಈ ದುಃಖಧಾಮದಿಂದ ಶಾಂತಿಧಾಮ, ಸುಖಧಾಮದಲ್ಲಿ ಹೋಗಬೇಕಾದರೆ ಈ ಮಾತುಗಳನ್ನು ತಿಳಿದುಕೊಳ್ಳಿರಿ.

ತಂದೆಯೊಬ್ಬರನ್ನು ಬಿಟ್ಟರೆ ಯಾವುದೇ ಮನುಷ್ಯರನ್ನು ಭಗವಂತನೆಂದು ಹೇಳುವುದು ತಪ್ಪಾಗಿದೆ ಎನ್ನುವುದು ನೀವು ಮಕ್ಕಳಿಗೆ ತಿಳಿದಿದೆ. ಭಗವಂತನು ಒಬ್ಬರೇ ಆಗಿದ್ದಾರೆ. ಈಗ ನೀವು ಮಕ್ಕಳು ಶಿವಪರಮಾತ್ಮ, ಬ್ರಹ್ಮ-ವಿಷ್ಣು-ಶಂಕರ, ಲಕ್ಷ್ಮಿ-ನಾರಾಯಣ ಮುಂತಾದವರೆಲ್ಲರ ಜೀವನ ಚರಿತ್ರೆಯನ್ನು ತಿಳಿದುಕೊಂಡಿದ್ದೀರಿ. ಈಗ ನೀವು ಶ್ರೀಮತದಂತೆ ಲಕ್ಷ್ಮೀ-ನಾರಾಯಣರ ಸಮಾನ ಶ್ರೇಷ್ಠರಾಗುತ್ತೀರಿ. ಅವಶ್ಯವಾಗಿ ಪವಿತ್ರರಂತೂ ಆಗಲೇಬೇಕು. ಪರಮಪಿತ ಪರಮಾತ್ಮನ ಶ್ರೀಮತದಂತೆ ಒಬ್ಬ ತಂದೆಯನ್ನು ನೆನಪು ಮಾಡುತ್ತೀರಿ ಮತ್ತು ಪವಿತ್ರರಾಗುತ್ತೀರೆಂದರೆ 21 ಜನ್ಮಗಳ ರಾಜ್ಯಭಾಗ್ಯ ಸಿಗುತ್ತದೆ. ಇದು ಎಷ್ಟೊಂದು ಸಹಜವಾದ ಮಾತಾಗಿದೆ. ಇದನ್ನು ತಿಳಿದುಕೊಳ್ಳುವುದರಿಂದ ನೀವು ಭಕ್ತಿಯ ಪೆಟ್ಟುಗಳಿಂದ ಅಳುವುದು, ಕಿರುಚಾಡುವುದರಿಂದ 21 ಜನ್ಮಗಳವರೆಗೆ ದೂರವಾಗುತ್ತೀರಿ. ಸತ್ಯಯುಗದ ಸ್ಥಾಪನೆ ಹೇಗಾಗುತ್ತದೆ ನಂತರ ಈ ಚಕ್ರವು ಹೇಗೆ ತಿರುಗುತ್ತದೆ ಎಂದು ನೀವು ತಿಳಿಸಿ ಕೊಡಬೇಕು. ಇಡೀ ವಿಶ್ವದ ಇತಿಹಾಸ-ಭೂಗೋಳವನ್ನು ತಿಳಿದುಕೊಳ್ಳಿ, ಇದನ್ನು ಮನುಷ್ಯರೇ ತಿಳಿದುಕೊಳ್ಳಬೇಕು. ಒಬ್ಬ ತಂದೆಯ ಶ್ರೀಮತದಂತೆ ನಡೆಯಬೇಕು ಅಂದಾಗ ಸರ್ವರ ಮೇಲೆ ದಯೆಯನ್ನೂ ಸಹ ಒಬ್ಬ ತಂದೆಯೇ ತೋರಿಸುತ್ತಾರೆ. ಅವರು ಜ್ಞಾನಸಾಗರ, ಸುಖಸಾಗರನಾಗಿದ್ದಾರೆ. ಅವರೇ ಈ ಮಾತೆಯರಿಗೆ ಜ್ಞಾನದ ಕಳಸವನ್ನು ಕೊಟ್ಟು ಆದರಿಂದ ಎಲ್ಲರನ್ನು ಪಾವನರನ್ನಾಗಿ ಮಾಡುತ್ತಾರೆ. ಉಳಿದಂತೆ ನೀರಿನ ನದಿಯು ಪಾವನರನ್ನಾಗಿ ಮಾಡಲು ಸಾಧ್ಯವಿಲ್ಲ. ಮಾತೆಯರು ಗೋವಾಗಿದ್ದಾರೆ. ಅವರಿಗೆ ಜ್ಞಾನದ ಕಳಸವು ಸಿಕ್ಕಿದೆ ಆದರೆ ಇಲ್ಲಿ ವಿದ್ಯೆಯಾಗಿದೆ, ಇದನ್ನು ಓದಿ ದೇವತೆಗಳಾಗಬೇಕು. ಬ್ರಾಹ್ಮಣ, ದೇವತಾ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಇದೆಲ್ಲವೂ ವರ್ಣಗಳಾಗಿವೆ. ಹೀಗೆ ಇದು 84 ಜನ್ಮಗಳ ಚಕ್ರವು ತಿರುಗುತ್ತಿರುತ್ತದೆ. ಈ ಚಕ್ರವನ್ನು ತಿಳಿದುಕೊಳ್ಳುವುದರಿಂದ ನೀವು

ಚಕ್ರವರ್ತಿ ರಾಜರಾಗುತ್ತೀರಿ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತ ಬಾಪ್ದಾದಾರವರ ನೆನಪು-ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

**ಧಾರಣೆಗಾಗಿ ಮುಖ್ಯಸಾರ:**

1) ಪವಿತ್ರತೆಯ ಬಲದಿಂದ ಶ್ರೀಮತದಂತೆ ನಡೆದು ಭಾರತವನ್ನು ಸ್ವರ್ಗವನ್ನಾಗಿ ಮಾಡುವ ಸೇವೆ ಮಾಡಬೇಕಾಗಿದೆ. ಪವಿತ್ರರಾದಾಗ ಪವಿತ್ರ ಪ್ರಪಂಚದ ಮಾಲೀಕರಾಗುತ್ತೀರಿ ಎಂದು ಎಲ್ಲರಿಗೂ ಒಬ್ಬ ತಂದೆಯ ಆದೇಶವನ್ನು ತಿಳಿಸಬೇಕಾಗಿದೆ.

2) ಪ್ರತಿಯೊಬ್ಬರಿಗೂ ಮೂವರು ತಂದೆಯರ ಪರಿಚಯವನ್ನು ಕೊಡಬೇಕಾಗಿದೆ. ದುಃಖಧಾಮದಿಂದ ಶಾಂತಿಧಾಮ ಮತ್ತು ಸುಖಧಾಮದಲ್ಲಿ ಹೋಗಲು ಮಾರ್ಗವನ್ನು ತೋರಿಸಬೇಕಾಗಿದೆ. ಅಲೆದಾಡುವುದರಿಂದ ದೂರ ಮಾಡಬೇಕಾಗಿದೆ.

**ವರದಾನ:** ಸರ್ವ ಶಕ್ತಿವಂತನ ಜೊತೆಯ ಅನುಭೂತಿಯ ಮುಖಾಂತರ ಸರ್ವ ಪ್ರಾಪ್ತಿಗಳ ಅನುಭವ ಮಾಡುವಂತಹ ತೃಪ್ತ ಆತ್ಮ ಭವ.

ಎಲ್ಲಿ ಸರ್ವ ಶಕ್ತಿವಂತ ತಂದೆಯಿದ್ದಾರೆ ಅಲ್ಲಿ ಸರ್ವ ಪ್ರಾಪ್ತಿಗಳ ಅನುಭವ ಸ್ವತಃ ಆಗುತ್ತಿರುತ್ತದೆ. ಹೇಗೆ ಬೀಜದಲ್ಲಿ ವೃಕ್ಷ ಸಮಾವೇಶವಾಗಿರುವುದು. ಇಂತಹ ಸರ್ವ ಶಕ್ತಿವಂತ ತಂದೆ ಜೊತೆಯಿದ್ದಲ್ಲಿ ಸದಾ ಮಾಲಾಮಲ್, ಸದಾ ತೃಪ್ತ, ಸದಾ ಸಂಪನ್ನವಾಗಿರುವುದು. ಎಂದೂ ಯಾವ ಮಾತಿನಲ್ಲಿಯೂ ಬಲಹೀನವಾಗಿರುವುದಿಲ್ಲ, ಎಂದೂ ಯಾವುದೇ ಕಂಪ್ಲೇಂಟ್ಸ್(ದೂರುಗಳು) ಮಾಡುವುದಿಲ್ಲ, ಸದಾ ಕಂಪ್ಲೀಟ್. ಏನು ಮಾಡುವುದು, ಸದಾ ಕಂಪ್ಲೀಟ್. ಏನು ಮಾಡುವುದು, ಹೇಗೆ ಮಾಡುವುದು...... ಇದು ಕಂಪ್ಲೇಂಟ್ಸ್ ಅಲ್ಲ. ಏನು ಏಕೆ ಎನ್ನುವ ಕ್ಯೂ ಸಮಾಪ್ತಿಯಾಗುವುದು. ಯಾರು ಸದಾ ಜೊತೆ ಇರುತ್ತಾರೆ ಅವರೇ ಜೊತೆಯಲ್ಲಿಯೂ ಬರುತ್ತಾರೆ.

**ಸ್ಲೋಗನ್:** ಕಣ್ಣುಗಳಲ್ಲಿ ಹೇಗೆ ಬೆಳಕು ಸಮಾವೇಶವಾಗಿರುವುದು ಅದೇ ರೀತಿ ಬುದ್ಧಿಯಲ್ಲಿ ಶಿವ ತಂದೆಯ ನೆನಪು ಸಮಾವೇಶವಾಗಿರಲಿ.